# IN THE COURT OF PRL.SENIOR CIVIL JUDGE & CJM, RAICHUR.
# CC.No.380/10

**CW-11& PW-11**
**Duly sworn on :29-02-2016**

| | | |
|---|---|---|
| Name | : | Anjamma |
| Father's/ Husband Name | : | K. Venkatesh |
| Age | : | 40 years, |
| Occupation | : | Anganawadi Teacher. |
| Address | : | Raichur. |

**ಮುಖ್ಯ ವಿಚಾರಣೆ ಹಿರಿಯ ಸರ್ಕಾರಿ ವಕಿಲರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಸುಮಾರು 5 ವರ್ಷಗಳ ಹಿಂದೆ ಆರೋಪಿ 1 ಮತ್ತು 2 ರವರು ಚೀಟಿ ವ್ಯವಹಾರ ಮಾಡುತ್ತಿದ್ದು ನಾನು ಆರೋಪಿ 1 ಮತ್ತು 2 ರಹತ್ತಿರ 1 ಚೀಟಿಗೆ ರೂ. 5000–00 ಗಳಂತೆ ಮೂರು ಚೀಟಿಗಳನ್ನು ಹಾಕಿದ್ದೆನು. ಆರೊಪಿತರು ಗಂಗಾಧ ರಹೆಸರಿನಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದರು. ಚೀಟಿ ಹಣ ರೂ. 15000–00 ಗಳನ್ನು ಮತ್ತು ಆರ್.ಡಿ. ಹಣ ರೂ. 500–00 ಮತ್ತು ರೂ. 200–00 ಮೂರು ಆರ್ .ಡಿ.ಗಳನ್ನು ಆರೋಪಿ 1 ಮತ್ತು 2 ರವರ ಕೈಯಲ್ಲಿ ನೀಡಿರುತ್ತೇನೆ. ಆರೋಪಿತರು ನನಗೆ ಚೀಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ ರೂ. 15000–00 ಗಳಿಗೆ ರೂ. 15000–00 ಗಳನ್ನು ಕೊಡುತ್ತೇವೆಂದು ತಿಳಿಸಿದ್ದರು. ಆದರೆ ಆರೋಪಿತರು ನನಗೆ ಯಾವುದೇ ಹಣ ವಾಪಾಸು ನೀಡಿರುವುದಿಲ್ಲ. ಆರ್.ಡಿ. ಹಣವನ್ನು ಕೂಡ ವಾಪಾಸು ಕೊಟ್ಟಿರುವುದಿಲ್ಲ. ಬಹಳ ದಿನಗಳವರೆಗೆ ಆರೋಪಿ 1 ಮತ್ತು 2 ಹಣ ಕೊಡುತ್ತಾರೆಂದು ದಾರಿ ನೋಡಿ ಕೊನೆಗೆ ಹೋಗಿ ಕೇಳಿದಾಗ ಅವರು ಊರು ಬಿಟ್ಟು ಹೋಗಿದ್ದಾರೆಂದು ತಿಳಿಯಿತು. ನಂತರ ನಾವು ಪೋಲೀಸರಿಗೆ ದೂರು ಕೊಟ್ಟಿದ್ದೆವು. ನಮ್ಮ ಕುಟುಂಬದಿಂದ ನನ್ನ ಹೆಸರಿನಲ್ಲಿ ಮತ್ತು ಪ್ರಶಾಂತ ಮತ್ತು ಕೆ. ವೆಂಕಟೇಶ ಎಂಬುವವರ ಹೆಸರಿನಲ್ಲಿ ಹಣ ಕಟ್ಟಿದ್ದೇವೆ. ನನ್ನಂತೆ ಇನ್ನೂ 8–10 ಜನ ಶಿಕ್ಷಕಿಯರು ಚೀಟಿ ಕಟ್ಟಿದ್ದರು.

**(ಮುಂದಿನ ಮುಖ್ಯ ಪರೀಕ್ಷೆಗೆ ಸಮಯ ಕೋರಿದ್ದು ಮುಂದೂಡಲಾಯಿತು.)**

ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತುಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

R.O.I & AC

CJM, Raichur.